ಊಟ ಸೇರದಿದ್ದರೂ ಒತ್ತಾಯದಿಂದ ಪ್ರಯತ್ನಿಸಿದ. 'ಅಮ್ಮ ನನಗೆ ಜ್ವರ ಕಡಿಮೆ ಆಗಿದೆ' ಎಂದು ಎರಡು ಮೂರು ಸಲ ಹೇಳಿದ. 'ಜ್ವರ ಕಡಿಮೆ ಆದರೆ ಖುಷಿಯೇ. ಆದರೆ ನಾಳೆ ಪಂದ್ಯಾಟಕ್ಕೆ ಹೋಗುವುದು ಇದೆ ಎಂದು ಸುಳ್ಳು ಹೇಳಬೇಡ' ಎಂದು ಅಮ್ಮ ಹೇಳಿದಳು. ರಾಜು ಊಟ ಮಾಡಿ ಮಲಗಲು ಹೊರಟಾಗ ಅಮ್ಮ ಒಂದು ಗುಳಿಗೆಯನ್ನು ನುಂಗಲು ಕೊಟ್ಟಳು. 'ಡಾಕ್ಟರ್ ಕೊಟ್ಟ ಗುಳಿಗೆ ಇಂದು ಖರ್ಚಾಯಿತು' ಅಂದಳು. ಇಂದು ಪೂರ್ತಿ ಕಡಿಮೆ ಆಗುತ್ತದೆ ಎಂದು ಡಾಕ್ಟರಿಗೆ ಗೊತ್ತಿತ್ತು ಎನ್ನುತ್ತಾ ರಾಜು ಗುಳಿಗೆಯನ್ನು ನುಂಗಿದ. ಅಮ್ಮ ಹಣೆ ಮುಟ್ಟಿ ನೋಡಿ 'ಇನ್ನೂ ಸ್ವಲ್ಪ ಜ್ವರ ಇದೆಯಲ್ಲ' ಎಂದಳು. 'ಇಲ್ಲ ಇಲ್ಲ ಕಡಿಮೆ ಆಗಿದೆ' ಎನ್ನುತ್ತಾ ರಾಜು ಮಲಗಿದ.

ಮರುದಿನ ಎದ್ದಾಗಲೂ ರಾಜುವಿಗೆ ಸ್ವಲ್ಪ ಚಳಿ ಅನಿಸಿತು. ಆದರೆ ಅಮ್ಮನಿಗೆ ಹೇಳಲಿಲ್ಲ. ಅಮ್ಮ 'ಜ್ವರ ಕಡಿಮೆ ಆಗಿದೆ' ಎನ್ನುತ್ತಾ ಅಮ್ಮ ಮಾಡಿಕೊಟ್ಟ ದೋಸೆ ತಿಂದು ಹೊರಡಲು ತಯಾರಾದ. ಜಿಲ್ಲಾ ಮಟ್ಟದ ಪಂದ್ಯಾಟ ಈ ವರ್ಷ ಅವರ ತಾಲ್ಲೂಕಿನಲ್ಲಿಯೇ ನಡೆಯುತ್ತಿದೆ. ಹಾಗಾಗಿ ಬಹಳ ದೂರ ಹೋಗಬೇಕಾಗಿಲ್ಲ. ಶಾಲೆಯಿಂದ ಪಂದ್ಯಾಟ ನಡೆಯುವ ಅವರ ತಾಲ್ಲೂಕಿನ ಮುಖ್ಯಸ್ಥಳಕ್ಕೆ ಹೋಗಲು ಮಿನಿ ಬಸ್ ಮಾಡಿದ್ದರು. ರಾಜು ಬಂದಿದ್ದರಿಂದ ಎಲ್ಲರೂ ಖುಷಿಯಾದರು. ರಾಜು ಜ್ವರ ಮರೆತು ಖುಷಿಯಾಗಿಯೇ ಇದ್ದ.

ಅವರದ್ದು ಕಬಡ್ಡಿ ತಂಡ. ಮೊದಲ ಕಬಡ್ಡಿ ಪಂದ್ಯದಲ್ಲಿ ಹತ್ತು ಅಂಕ ಗಳಿಸಿ ತನ್ನ ತಂಡದ ಗೆಲುವಿಗೆ ರಾಜು ಕಾರಣನಾದ. ಆದರೆ ಅವನಿಗೆ ಆಯಾಸವಾದಂತೆ ಅನಿಸಿತು. ಆದರೆ ಯಾರಿಗೂ ಹೇಳಲಿಲ್ಲ. ಎಲ್ಲರೂ ಖುಷಿಯಲ್ಲಿ ಇದ್ದರು. ಎರಡನೇ ಪಂದ್ಯದಲ್ಲೂ ರಾಜುವಿನ ತಂಡಕ್ಕೇ ಗೆಲುವಾಯಿತು. ಅವನ ಗೆಳೆಯರಿಗೆಲ್ಲ ಖುಷಿಯೋ ಖುಷಿ. ರಾಜುವಿಗೆ ತುಂಬಾ ಆಯಾಸವಾಗಿ ಆಡಲಾಗದು ಎನಿಸಿತ್ತು.

ಇನ್ನು ಉಳಿದದ್ದು ಕೊನೆಯ ಪಂದ್ಯ. ಇದರಲ್ಲಿ ಗೆದ್ದರೆ ಜಿಲ್ಲಾ ಮಟ್ಟದ ದೊಡ್ಡ ಶೀಲ್ಡ್ ಅವರ ಶಾಲೆಗೆ. ರಾಜು ಮತ್ತೆ ಗೆಲುವು ನಮ್ಮದಾಗಲಿ ಎಂದು ಕಣ್ಣು ಮುಚ್ಚಿ ಧ್ಯಾನಿಸಿದ.

ಆಟ ಶುರುವಾಯಿತು. ಎರಡೂ ತಂಡಗಳು ಬಹಳ ಚುರುಕಿನಿಂದ ಆಡುತ್ತಿದ್ದವು. ಈಗ ಇನ್ನು ಒಂದು ರೈಡ್ ಮಾತ್ರ ಇತ್ತು. ಎರಡೂ ತಂಡದ ಅಂಕಗಳು ಸಮವಾಗಿದ್ದವು. ಎಲ್ಲರೂ ರಾಜು ರಾಜು ಎಂದು ಕೂಗುತ್ತಿದ್ದರು. ರಾಜು ಹುಲಿಯಂತೆ ಜಿಗಿದು ಹೋದ. ಒಬ್ಬನನ್ನು ಮುಟ್ಟಿ ಹಿಂದಿರುಗಬೇಕು ಎನ್ನುವಷ್ಟರಲ್ಲಿ ಅವನ ಎರಡು ಕಾಲನ್ನು ಯಾರೋ ಹಿಡಿದರು. ಆದರೂ ಚುರುಕಿನಿಂದ ಜಿಗಿದು ತಪ್ಪಿಸಿಕೊಂಡು ಮಧ್ಯದ ಗೆರೆಯ ಮೇಲೆ ಬಿದ್ದ! ಆತಿಥೇಯ ತಂಡದ ಗೆಲುವು ಅಲ್ಲಿ ಸೇರಿದ್ದ ಎಲ್ಲರಿಗೂ ಖುಷಿಯನ್ನು ತಂದಿತ್ತು. ರಾಜು ರಾಜು ಎಂದು ಕೂಗುತ್ತಾ ಆಟಗಾರ ಗೆಳೆಯರೆಲ್ಲ ಅವನನ್ನು ಮುತ್ತಿದರು. ಅವನು ಮಾತಾಡಲಿಲ್ಲ. ಅವನು ಹಾಗೆಯೇ ಮಲಗಿದ್ದ. ರಾಜುವಿಗೆ ಎಚ್ಚರ ತಪ್ಪಿ ಹೋಗಿತ್ತು. ಯಾರೋ ನೀರು ತಂದು ಚಿಮುಕಿಸಿದರು. ಈಗ ರಾಜುಗೆ ಏನೋ ಒಂದಿಷ್ಟು ಗದ್ದಲವಾದಂತೆ ಕೇಳಿಸುತ್ತಿತ್ತು. ಅಷ್ಟರಲ್ಲಿ ಅವನಿಗೆ ಆ್ಯಂಬುಲೆನ್ಸ್ ಧ್ವನಿ ಸ್ಪಷ್ಟವಾಗಿ ಕೇಳತೊಡಗಿತು. ಆದರೂ ಅವನು ಸಂತಸದಿಂದ ತೇಲುತ್ತಲಿದ್ದ. ■





**ಅಲೆಕ್ಸಾಂಡರ್**
4ನೇ ತರಗತಿ,
ಸಂತ ಜೋಸೆಫ್ ಅಕ್ಷರಧಾಮ ಸ್ಕೂಲ್,
ಶಿವಮೊಗ್ಗ



**ಅದಿತಿ ಭಾರದ್ವಾಜ್**
3ನೇ ತರಗತಿ, ಎನ್‌ಪಿಎಸ್,
ಬೆಂಗಳೂರು

